# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ/294/ಗ್ರಾಪಂಅ/2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 19-04-2014.

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

ಇವರಿಗೆ:
ನೊಂದಣಿ ಮಹಾ ಪರಿವೀಕ್ಷಕರು,
ಹಾಗೂ ಮುದ್ರಾಂಕಗಳ ಆಯುಕ್ತರು,
8ನೇ ಮಹಡಿ, ಕಂದಾಯ ಭವನ,
ಕೆ.ಜಿ. ರಸ್ತೆ, ಬೆಂಗಳೂರು.

ಮಾನ್ಯರೆ,

ವಿಷಯ: ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ 11ಬಿ ಗಳನ್ನು ನಕಲಿಯಾಗಿ ಸೃಷ್ಟಿಸಿ, ನೋಂದಾಯಿಸುತ್ತಿರುವ ಬಗ್ಗೆ.

ಉಲ್ಲೇಖ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ರವರ ಅರೆ ಸರ್ಕಾರಿ ಪತ್ರ ಸಂ: ಆಡಳಿತ(5)ಗ್ರಾಪಂಅ/109/2013-14 ದಿ:04-04-2014.

* * * * *

ಬೆಂಗಳೂರು ಸುತ್ತಮುತ್ತಲಿನ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯತಿಗಳಲ್ಲಿ ಅನಧಿಕೃತವಾಗಿ ಸೃಷ್ಟಿಸಿರುವ ನಕಲಿ ನಮೂನೆ 11ಬಿ ಗಳ ಆಧಾರದ ಮೇಲೆ ಉಪ ನೊಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿ ಮಾಡುತ್ತಿರುವುದರ ಬಗ್ಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಿಳಿಸಿದ್ದು, ನಕಲಿ ನಮೂನೆ 11ಬಿ ಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಡಿಜಿಟಲ್ ಸಹಿಯೊಂದಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ವಿತರಿಸಿರುವುದಿಲ್ಲ. ನಮೂನೆಗಳ ಕ್ರಮ ಸಂಖ್ಯೆಗಳು ಒಂದೇ ರೀತಿಯಾಗಿರುತ್ತವೆ.

ಉದಾ: ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ, ಸೊಂಡೆಕೊಪ್ಪ, ಹುಸ್ಕೂರು, ಮತ್ತಿತರ ಗ್ರಾಮ ಪಂಚಾಯತಿಗಳ 10 ಅಂಕಿಗಳ ಗುರುತಿನ ಸಂಖ್ಯೆಯು ಆಯಾ ಗ್ರಾಮ ಪಂಚಾಯತಿಗೆ ಸಂಬಂಧಪಡದ ಗುರುತಿನ ಸಂಖ್ಯೆಯಾಗಿರುತ್ತದೆ. ನಿವೇಶನಗಳಿಗೆ ವಿದ್ಯುತ್ ಬಿಲ್ ಇರುವಂತೆ ನಮೂದಾಗಿರುತ್ತದೆ. ವಾಟರ್ ಮಾರ್ಕ್ ಮತ್ತು ಹಾಲೋಗ್ರಾಂಗಳನ್ನು ಪರಿಶೀಲಿಸದೇ ನೊಂದಣಿ ಮಾಡಲಾಗಿದೆ. ರಸೀದಿ ಸಂಖ್ಯೆಯನ್ನು ಸಿಂಗಲ್ ಡಿಜಿಟ್‌ನಲ್ಲಿ ನಮೂದಿಸಲಾಗಿದೆ. ಕನಿಷ್ಠ 6 ಅಂಕಿಯ ಸಂಖ್ಯೆಯುಳ್ಳ ರಸೀದಿಗಳು ಬೆಂಗಳೂರು ನಗರ ಜಿಲ್ಲಾ ಪಂಚಾಯತಿಯಿಂದ ಮಾತ್ರ ಗ್ರಾಮ ಪಂಚಾಯತಿಗಳಿಗೆ ಸರಬರಾಜಾಗಿರುತ್ತದೆ. ಪ್ರಮಾಣ ಪತ್ರದ ಸಂಖ್ಯೆಯು ಎಲ್ಲಾ ಆಸ್ತಿಗಳಿಗೆ ಒಂದೇ ಆಗಿರುವಂತೆ ನಮೂದಿಸಲಾಗಿದೆ. ವಾಸ್ತವವಾಗಿ ಅದು ಬೇರೆ ಬೇರೆಯಾಗಿರಬೇಕಾಗಿರುತ್ತದೆ. ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯ ನಿರ್ಣಯ ಸಂಖ್ಯೆ ಮತ್ತು ದಿನಾಂಕಗಳನ್ನು ನಮೂದಿಸಲಾಗಿದ್ದು, ಆ ದಿನಗಳಂದು ಸಾಮಾನ್ಯ ಸಭೆ ನಡೆಸಲಾಗಿರುವುದಿಲ್ಲ.

ಇದರ ಬಗ್ಗೆ ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ, ಹುಸ್ಕೂರು, ಸೊಂಡೆಕೊಪ್ಪ, ಕಿತ್ತನಹಳ್ಳಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಈ ಮೇಲ್/ಪತ್ರದ ಮೂಲಕ ತಿಳಿಸಿದ್ದು ದಿನಾಂಕ:05/04/2014 ರಂದು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಸಹ ಈಮೇಲ್ ಮೂಲಕ ನಕಲಿ ನಮೂನೆ 11 ಬಿಗಳ ಆಧಾಳದ ಮೇಲೆ ಉಪನೋಂದಾಣಾಧ್ಧಿಕಾರಿಗಳ ಕಚೇರಿಯಲ್ಲಿ ನೋಂದಣಿ ಮಾಡುತ್ತಿರುವ ಬಗ್ಗೆ ಗಮನ ಸೆಳೆದಿರುತ್ತಾರೆ. ರಾಜ್ಯದ ಇತರೆ ಜಿಲ್ಲೆಗಳಲ್ಲಿ ಗ್ರಾಮ ಪಂಚಾಯತಿಗಳಲ್ಲಿ ನಕಲಿ ನಮೂನೆ 11ಬಿ ಗಳ ಆಧಾರದ ಮೇಲೆ ಉಪನೋಂದಾಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡುವ ಸಂಭವವಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಅನಧಿಕೃತವಾಗಿ ಸೃಷ್ಟಿಸಿರುವ ದಾಖಲೆಗಳ ಆಧಾರದ ಮೇಲೆ ನೋಂದಣಿ ಮಾಡಬಾರದೆಂದು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಈಗಾಗಲೇ ಉಪ ನೊಂದಣಾಧಿಕಾರಿಗಳಿಗೆ ಪತ್ರ ಮುಖೇನ ತಿಳಿಸಿದ್ದರೂ, ಸದರಿ ಪತ್ರಕ್ಕೆ ಉಪ ನೊಂದಣಾಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸುವುದು ತಮ್ಮ ಜವಾಬ್ದಾರಿಯಲ್ಲವೆಂದು, ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಡಿಜಿಟಲ್ ಸಹಿಯನ್ನು ಮಾತ್ರ ಪರಿಗಣಿಸಿ ನೋಂದಣಿ ಮಾಡುತ್ತೇವೆಂದು ತಿಳಿಸಿರುವುದು ಕಂಡುಬಂದಿರುತ್ತದೆ.

ನಕಲಿ ನಮೂನೆ 11ಬಿಗಳ ಆಧಾರದ ಮೇಲೆ ನೊಂದಣಿಯನ್ನು ತಡೆಗಟ್ಟಲು ಉಪನೋಂದಾಣಾಧಿಕಾರಿಗಳು ನೋಂದಣಿ ಸಂದರ್ಭದಲ್ಲಿ ನಮೂನೆ 9, 11ಎ ಹಾಗೂ 11 ಬಿ ಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ನೋಂದಣಿ ಮಾಡುವುದು. ನಕಲಿ ನಮೂನೆ 11ಬಿ ಆಧಾರದ ಮೇಲೆ ನೊಂದಣಿ ಮಾಡುವುದನ್ನು ತಡೆಗಟ್ಟಲು ಹಾಗೂ ತಪ್ಪಿತಸ್ಥ ಉಪನೊಂದಣಾಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳುವಂತೆ ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

19/4/14

(ಕೆ. ಯಾಲಕ್ಕಿಗೌಡ)
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

19/4

ಪ್ರತಿಯನ್ನು: ಮಾಹಿತಿ ಸೂಕ್ತ ಕ್ರಮಕ್ಕಾಗಿ;-

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಎಲ್ಲಾ ಜಿಲ್ಲೆಗಳ ಜಿಲ್ಲಾ ನೋಂದಾಣಾಧಿಕಾರಿಗಳು.
3. ಎಲ್ಲಾ ಉಪನೊಂದಾಣಾಧಿಕಾರಿಗಳು.